**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:DCE/BUD/GCC/2/2023-E- 1063998

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು ದಿನಾಂಕ:17.04.2023

ಇವರಿಗೆ,

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯ ಎಲ್ಲಾ ಡಿಡಿಒ ಗಳಿಗೆ

ಮಾನ್ಯರೇ,

ವಿಷಯ: ಸರ್ಕಾರದ ಸುತ್ತೋಲೆ ಪರಿಚಲಿಸುವ ಬಗ್ಗೆ.

ಸರ್ಕಾರದಿಂದ ಜಾರಿಗೊಳಿಸಿರುವ / ಹೊರಡಿಸಲಾಗಿರುವ ಈ ಕೆಳಕಂಡ ಸುತ್ತೋಲೆಯನ್ನು ಈ ಪತ್ರಕ್ಕೆ ಲಗತ್ತಿಸಲಾಗಿದ್ದು, ಇಲಾಖಾ ವ್ಯಾಪ್ತಿಯ ಎಲ್ಲಾ ಡಿಡಿಒ ಗಳು ಅದರಂತೆ ಕ್ರಮವಹಿಸಲು ಸೂಚಿಸುತ್ತಾ ಸದರಿ ಸುತ್ತೋಲೆಯನ್ನು ಪರಿಚಲಿಸಲಾಗಿದೆ.

| ಕ್ರ.ಸಂ | ಸುತ್ತೋಲೆ | ವಿಷಯ |
|---|---|---|
| 01 | ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಆಇ 04 ಟಿ ಎಫ್ ಪಿ 2023 ದಿನಾಂಕ: 06.04.2022 | ಹಿಂದಿನ ಆರ್ಥಿಕ ವರ್ಷದ/ವರ್ಷಗಳ ವೇತನ ಬಾಕಿಯನ್ನು ಸೆಳೆಯದಿರುವ ಬಗ್ಗೆ |

ಅಡಕ: ಮೇಲಿನಂತೆ

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಗೆ:

1) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು

2) ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಆಇ 04 ಟಿಎಫ್‌ಪಿ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ: 06-04-2023

**ಸುತ್ತೋಲೆ**

ವಿಷಯ:- ಹಿಂದಿನ ಆರ್ಥಿಕ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯದಿರುವ ಬಗ್ಗೆ.

*********

ಪ್ರತಿ ಆರ್ಥಿಕ ಸಾಲಿನಲ್ಲಿ ಆಯವ್ಯಯ ಅಂದಾಜುಗಳನ್ನು ಇಲಾಖೆಗಳಿಂದ ಮಂಜೂರಾದ ಹುದ್ದೆಗಳಿಗೆ ದೃಢೀಕರಣ ಪಡೆದು ಹಾಗೂ HRMS ನಿಂದ ಕಾರ್ಯನಿರತ ಹುದ್ದೆಗಳ ವಿವರಗಳನ್ನು ಪಡೆದು ವೇತನ ಅಂದಾಜಿಸಲಾಗುತ್ತಿದೆ.

2023-24 ನೇ ಸಾಲಿಗೆ ಲೇಖಾನುದಾನಕ್ಕೆ ವಿಧಾನ ಮಂಡಲ ಅನುಮೋದಿಸಿದ್ದು, ವೇತನ ಸೇರಿದಂತೆ ಎಲ್ಲಾ ಲೆಕ್ಕಶೀರ್ಷಿಕೆಗಳಡಿ 1/3 ರಷ್ಟು ಮೊತ್ತವನ್ನು ಮಾತ್ರ ಸೆಳೆಯಬಹುದಾಗಿರುತ್ತದೆ. ಆದ್ದರಿಂದ ಯಾವುದೇ ಕಾರಣಗಳಿಂದಾಗಿ, ವೇತನ ಬಾಕಿಯನ್ನು ಪ್ರಸ್ತುತ ವರ್ಷದ ಅನುದಾನದಿಂದ ಸೆಳೆದಲ್ಲಿ ಈ ವರ್ಷದ ವೇತನ ಸೆಳೆಯಲು ಕೊರತೆಯಾಗುತ್ತದೆ.

ಆದುದರಿಂದ, ಎಲ್ಲಾ ಇಲಾಖೆಗಳು ವೇತನಕ್ಕೆ ಸಂಬಂಧಿಸಿದಂತೆ ಬಾಕಿಗಳನ್ನು ಸೆಳೆಯಲು ಆದೇಶ ಹೊರಡಿಸದಂತೆ ಹಾಗೂ ಬಾಕಿ ವೇತನಗಳನ್ನು ಸೆಳೆಯಲು ಪೂರ್ಣ ಆಯವ್ಯಯಕ್ಕೆ ಅನುಮೋದನೆ ದೊರೆತ ನಂತರ ಆರ್ಥಿಕ ಇಲಾಖೆಗೆ ವಿವರಣೆ ಹಾಗೂ ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆದುಕೊಂಡು ಬಾಕಿ ವೇತನಗಳನ್ನು ಸೆಳೆಯತಕ್ಕದೆಂದು ಈ ಮೂಲಕ ತಿಳಿಸಲಾಗಿದೆ. ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆಯದಿದ್ದಲ್ಲಿ ಖಜಾನೆಯು ಹಿಂದಿನ ವರ್ಷಗಳ ಬಾಕಿ ವೇತನ ಸೆಳೆಯಲು ಅನುವು ಮಾಡತಕ್ಕದ್ದಲ್ಲವೆಂದು ತಿಳಿಸಲಾಗಿದೆ.

Signed by Shobha Ha
Date: 06-04-2023 12:54:34
(ಹೆಚ್.ಎ. ಶೋಭ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ/ಕಾರ್ಯದರ್ಶಿಗಳು.



Generated from eOffice by YOGISH D, DCE-FDA-BUD(YD), FIRST DIVISION ASSISTANT, DEPARTMENT OF COLLEGIATE EDUCATION on 18/04/2023 12:03 PM